# <u>ಅಮೇರಿಕಾದ ಸಂಕುಚಿತ ನಿಲವು</u>

ಅರುಣ್‌ಜೇಟ್ಲಿ
ರಾಜ್ಯ ಸಭಾ ವಿರೋಧ ಪಕ್ಷದ ನಾಯಕರು

2002ರ ದಂಗೆಕುರಿತಂತೆಎಸ್‌ಐಟಿ ವರದಿಯನ್ನು ಸ್ವೀಕರಿಸಿ ಪ್ರತಿಭಟನಾಅರ್ಜಿಯನ್ನು ನಿನ್ನೆ ವಜಾಗೊಳಿಸಿರುವ ಬೆಳವಣಿಗೆ ಎಲ್ಲರಿಗೂ ಬಹು ಮುಖ್ಯ ಪಾಠ ಕಲಿಸುತ್ತದೆ.ವಸ್ತುಸ್ಥಿತಿಯ ವಿರುದ್ಧವಾದಅಪಪ್ರಚಾರವು ಸಮಾಲೋಚನೆಯ ದಿಕ್ಕನ್ನುಎಷ್ಟರ ಮಟ್ಟಕ್ಕೆ ಬದಲಾಯಿಸಬಲ್ಲದು.ನರೇಂದ್ರ ಮೋದಿ ಅವರನ್ನು ಆರೋಪಿಗಳಾಗಿ ಬಣ್ಣಿಸಲು ಮಾಧ್ಯಮಗಳ ಒಂದು ವರ್ಗ ಹಾಗೂ ಕೆಲವು ಸರ್ಕಾರೇತರ ಸೇವಾ ಸಂಸ್ಥೆಗಳು ಪೈಪೋಟಿ ಮೇಲೆ ತಪ್ಪು ಆರೋಪಗಳನ್ನು ಅವರ ಮೇಲೆ ಹೊರೆಸಿದವು.ಈ ವಿಚಾರದಲ್ಲಿ ನಡೆದ ಸಮಾಲೋಚನೆಗಳು ಎಷ್ಟರ ಮಟ್ಟಿಗೆ ದಿಕ್ಕು ತಪ್ಪಿದ್ದವು ಎಂಬ ಆತ್ಮಾವಲೋಕನಆಗಬೇಕಿದೆ.ಭಾರತದ ಮುಖ್ಯ ನ್ಯಾಯಾಧೀಶರೊಬ್ಬರು ಸತ್ಯಾಸತ್ಯತೆಯ ವಿವೇಚನೆಯಿಲ್ಲದೆ ‘ನೀರೋ’ ಎಂಬ ಅನುಚಿತವಾದ ಅನಿಸಿಕೆ ವ್ಯಕ್ತಪಡಿಸಿದ್ದರು.ಅವರೀಗತಮ್ಮ ಅನಿಸಿಕೆಯನ್ನು ಹಿಂಪಡೆಯುವರೆ.ಓರ್ವ ಸಂಪಾದಕರು ‘ಸಾಮೂಹಿಕ ಹಂತಕ’ ಎಂಬ ಉತ್ಪ್ರೇಕ್ಷಣೀಯ ಪದಗಳ ಬಳಕೆ ಮಾಡಿದ್ದರು.ಭಾರತದ ಸ್ನೇಹಿತರುಎಂದು ಹೇಳಿಕೊಳ್ಳುವ ಕೆಲವು ರಾಷ್ಟ್ರಗಳು ತಮ್ಮದೇಆದ ‘ಕಂಗಾರು ನ್ಯಾಯಾಲಯ’ದಲ್ಲಿ ವಿಚಾರಣೆ ನಡೆಸುತ್ತ ಮೋದಿಯವರನ್ನುಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದರು.2002ರ ದಂಗೆ ಪ್ರಕರಣದಲ್ಲಿ ಮೋದಿ ಅವರಷ್ಟುತೀಕ್ಷ್ಣತರವಾದ ವಿಚಾರಣೆಗಳನ್ನು ಸ್ವತಂತ್ರ್ಯ ನಂತರದ ಬೇರಾವುದೇ ಭಾರತೀಯರಾಜಕಾರಣಿ ಎದುರಿಸಿರಲಾರರು ಎಂಬ ಸತ್ಯವನ್ನುಅವರು ಕಡೆಗಣಿಸಿದ್ದಾರೆ.ದೇಶದ ಸರ್ವೋಚ್ಚ ನ್ಯಾಯಾಲಯಅವರ ವಿರುದ್ಧದ ಪ್ರಕರಣಗಳ ಮೇಲುಸ್ತುವಾರಿ ವಹಿಸಿತು.ಅವರ ವಿರುದ್ಧ ಹೂಡಲಾದ ಮೊಕದ್ದಮೆಗಳ ವಿಚಾರಣೆ ನಡೆಸಲು ಸರ್ವಶ್ರೇಷ್ಠ ಅಧಿಕಾರಿಗಳನ್ನು ನೇಮಿಸಲಾಯಿತು.ತನಿಖಾತಂಡ ನೂರಾರು ಸಾಕ್ಷಿಗಳನ್ನು ವಿಚಾರಿಸಿತು. ಮುಖ್ಯ ಮಂತ್ರಿಗಳನ್ನು ಒಂಬತ್ತು ತಾಸುಗಳಿಗೂ ಹೆಚ್ಚು ಅವಧಿಯವರೆಗುಎಸ್‌ಐಟಿಕಟುವಾದ ವಿಚಾರಣೆಗೆ ಒಳಪಡಿಸಿತು.ಅವರನ್ನುಆರೋಪಮುಕ್ತರೆಂದುಎಸ್‌ಐಟಿ ವರದಿ ನೀಡಿದ್ದರೂಕೂಡ, ಸರ್ವೋಚ್ಚ ನ್ಯಾಯಾಲಯದ ಪರಿಶೀಲನೆ, ನ್ಯಾಯಾಲಯದ ಆಪ್ತ ಸಲಹೆಗಾರರಅಭಿಪ್ರಾಯ, ಪ್ರತಿಭಟನಾಅರ್ಜಿ ಹಾಗೂ ಕಡೆಯದಾಗಿಅವರ ಪ್ರಕರಣವನ್ನು ನ್ಯಾಯಿಕತಜ್ಞರ ಸಾಣೆಗೆ ಹಚ್ಚಲಾಯಿತು.ಸೂಕ್ತ ಕಾನೂನು ಪ್ರಕ್ರಿಯೆ ನಂತರ ನ್ಯಾಯಾಲಯವು ಮೋದಿ ಅವರ ವಿರುದ್ಧತೃಣಮಾತ್ರದಷ್ಟು ಸಾಕ್ಷ್ಯಾಧಾರಗಳಿಲ್ಲವೆಂದು ತೀರ್ಮಾನಿಸಿದೆ.

ಮೋದಿ ಅವರ ವಿಚಾರದಲ್ಲಿಅಮೆರಿಕತೆಗೆದುಕೊಂಡ ನಿರ್ಣಯದಕಿಮ್ಮತ್ತು ಎಷ್ಟು?2005ರಿಂದ ಈವರೆಗೂಅಮೆರಿಕ ವೀಸಾಗಾಗಿ ಮೋದಿಯವರು ಪ್ರಯತ್ನಿಸಿಲ್ಲ. ಅವರುಅಮೆರಿಕ ವೀಸಾಗಾಗಿ ಅರ್ಜಿ ಸಲ್ಲಿಸಬಾರದುಎಂಬುದು ನನ್ನ ವೈಯಕ್ತಿಕಅಭಿಪ್ರಾಯವೂ ಹೌದು.ಅದರಕಂಗಾರು ನ್ಯಾಯಾಲಯದಅಭಿಮತಕ್ಕೆಅನುಗುಣವಾಗಿಅಮೆರಿಕತನ್ನ ನಿಲುವು ರೂಪಿಸಿಕೊಂಡಿತು.ತನಿಖೆ ಮತ್ತು ನ್ಯಾಯಿಕ ಪರಿಶೀಲನೆ ನಂತರವೂಯಾವುದೇ ಸಾಕ್ಷ್ಯಾಧಾರಗಳು ಮೋದಿ ಅವರ ವಿರುದ್ಧದೊರೆಯದೇಇದ್ದರೂ, ಅವರನ್ನು ದೋಷಿಗಳಾಗಿ ಪರಿಗಣಿಸುವುದುಅಪಕ್ವರಾಜತಾಂತ್ರಿಕತೆಯಾಗಿದೆ. ಭಾರತದಆಂತರಿಕ ವಿಚಾರದಲ್ಲಿ ಹಸ್ತಕ್ಷೇಪ ಮಾಡಿದಂತಾಗಿದೆ.ಅವರ ಈ ಸಂಕುಚಿತ ನಿಲವು, ತಿರುಗುಬಾಣವಾಗಬಲ್ಲದು.ಮರು ಪ್ರತಿಕ್ರಿಯೆ ನೀಡುವ ಸನ್ನಿವೇಶ ನಿರ್ಮಾಣಗೊಂಡಿದೆ.ಇಂತಹ ಸಂದಿಗ್ಧ ಪರಿಸ್ಥಿತಿಗೆ ತಮ್ಮನ್ನುಎಡೆಮಾಡಿಕೊಂಡಿರುವ ಬಗ್ಗೆ ಅಮೇರಿಕಚಿಂತನೆ ನಡೆಸಬೇಕಾಗಿದೆ.

✲✲✲✲✲✲